ಬೈಲಹೊಂಗಲ ಬಸ್ ನಿಲ್ದಾಣದ ಡಾಂಬರೀಕರಣ ಮಾಡುವುದು ಹಾಗೂ ಸ್ವಚ್ಛತೆ ಕಾಪಾಡುವುದು.

2783: (3762)

ಶ್ರೀ ಮಹಾಂತೇಶ ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಬಸ್ ಸ್ಟ್ಯಾಂಡಿನಲ್ಲಿ ತಗ್ಗುಗಳು ಬಿದ್ದಿದ್ದು ಕೂಡಲೇ ಇಲ್ಲಿ ಡಾಂಬರೀಕರಣ ಮಾಡುವುದು ಅವಶ್ಯವಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬೈಲಹೊಂಗಲ ಬಸ್‌ಸ್ಟ್ಯಾಂಡು ಚಿಕ್ಕದಾಗಿದ್ದು ಕವರ್ ಅಕಮೋಡೇಶನ್ ಬಸ್‌ಸ್ಟ್ಯಾಂಡಿನಲ್ಲಿ ನೀರು ಬರದಂತೆ ಮಾಡುವ ಬಗ್ಗೆ ಕೈಗೊಳ್ಳಲಿರುವ ಕ್ರಮಗಳೇನು;

ಇ) ಈ ಬಸ್‌ಸ್ಟ್ಯಾಂಡಿನಲ್ಲಿರುವ ಮೂತ್ರಾಲಯ ಮತ್ತು ಶೌಚಾಲಯವನ್ನು ನವೀಕರಿಸಲು ಮತ್ತು ಬಸ್ ಸ್ಟ್ಯಾಂಡ್‌ನ್ನು ಸ್ವಚ್ಛವಾಗಿಟ್ಟುಕೊಳ್ಳಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಹೌದು.

ಆ) ಕವರ್ಡ್ ಅಕಮೊಡೇಶನ್ ಕೆಲಸ ಪ್ರಾರಂಭಿಸಿದೆ. ಆವರಣದ ನೀರು ಬಸ್ ಸ್ಟ್ಯಾಂಡ್ ಒಳಗೆ ಬರದಂತೆ ಪ್ಲಿಂತ್ ಎತ್ತರವನ್ನು ಹೆಚ್ಚಿಸಲು ಯೋಜಿಸಲಾಗಿದೆ.

ಇ) ಸದರಿ ಬಸ್ ಸ್ಟ್ಯಾಂಡ್‌ನಲ್ಲಿ ಒಂದು ಹೆಚ್ಚುವರಿ ಶೌಚಾಲಯವನ್ನು ನಿರ್ಮಿಸಿದ್ದು, ಹಳೆಯ ಶೌಚಾಲಯವನ್ನು ಸಹ ನವೀಕರಿಸಲಾಗಿದೆ; ಹಾಗೂ ಬಸ್ ಸ್ಟ್ಯಾಂಡ್ ಸ್ವಚ್ಛವಾಗಿಡಲು ಕ್ರಮ ಕೈಗೊಳ್ಳಲಾಗುವುದು.

ಸಾರಿಗೆ ಸಂಸ್ಥೆಯ ಹೊಸ ವಿಭಾಗಗಳು.

2784: (3763)

ಶ್ರೀ ಮಹಾಂತೇಶ ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸದಾಗಿ ಎಷ್ಟು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಿಭಾಗಗಳನ್ನು ತೆರೆಯಲಾಗಿದೆ. ಅವು ಯಾವುವು; ಮತ್ತು ಇನ್ನೂ ಎಷ್ಟು ಹೊಸ ವಿಭಾಗಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

ಆ) ಈ ಹೊಸ ವಿಭಾಗಗಳನ್ನು ಪ್ರಾರಂಭಿಸಿರುವುದರಿಂದ ಯಾವ ಯಾವ ವಿಭಾಗಗಳಿಗೆ ಎಷ್ಟು ಎಷ್ಟು ಲಾಭ- ಹಾನಿಗಳುಂಟಾಗಿರುವುವು?

ಇ) ಹಾನಿಯಾಗಿರುವ ವಿಭಾಗಗಳನ್ನು ಸುಧಾರಿಸಲು ಸರಕಾರ ಕ್ರಮ ಕೈಗೊಳ್ಳುವರೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) 1990-91ರ ನಂತರ 5 ವಿಭಾಗಗಳನ್ನು (ಬೆಂಗಳೂರುನಗರ ಸಾರಿಗೆ ಹೊರತು ಪಡಿಸಿ) ಪ್ರಾರಂಭಿಸಲಾಗಿದೆ.

1) ಬೆಂಗಳೂರು (ಗ್ರಾಮಾಂತರ) ವಿಭಾಗ

2) ದಾವಣಗೆರೆ

3) ಗದಗ

4) ಬಾಗಲಕೋಟೆ

5) ಬೀದರ್

ಹೊಸದಾಗಿ ಇನ್ನೂ 5 ವಿಭಾಗಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

ಆ) ಈ ಹೊಸ ವಿಭಾಗಗಳ ಲಾಭ: ನಷ್ಟದ ವಿವರಗಳನ್ನು 1990-91ರಿಂದ 1997-98ರವರೆಗೆ ಅನುಬಂಧದಲ್ಲಿ ಕೊಡಲಾಗಿದೆ.

ಇ) ಹಾನಿಯಾಗಿರುವ ವಿಭಾಗಗಳನ್ನು ಸರಿಪಡಿಸಲು ಈ ಕೆಳಕಂಡ ಕ್ರಮಗಳನ್ನು ಸಂಸ್ಥೆಯು ತೆಗೆದುಕೊಳ್ಳಲಾಗುತ್ತಿದೆ.

1) ಮಾರ್ಗಗಳ ಕಾರ್ಯಾಚರಣೆಯನ್ನು ಪುನರ್‌ರಚಿಸುವ ಮೂಲಕ ಆದಾಯವನ್ನು ಹೆಚ್ಚಿಸುವಿಕೆ.

2) ಸೋರಿಕೆಯನ್ನು ತಡೆಗಟ್ಟಲು ವಾಹನ ತನಿಖೆಯನ್ನು ಚುರುಕುಗೊಳಿಸುವಿಕೆ.

3) ಪ್ರತಿ ಕಿ.ಮೀ.ಗೆ ತಗಲುವ ಇಂಧನ, ಟೈರುಗಳ ಬಳಕೆ, ವಾಹನ ಬಳಕೆ,

ಚಾಲಕ ಮತ್ತು ನಿರ್ವಾಹಕರ ಬಳಕೆ ಮುಂತಾದ ಭೌತಿಕ ಕಾರ್ಯಾಚರಣೆಯಲ್ಲಿ ಸುಧಾರಣೆ.

ಸದಸ್ಯರಾದ ಶ್ರೀ ಮಹಾಂತೇಶ ಎಸ್.ಕೌಜಲಗಿ ರವರ ವಿಧಾನಸಭಾ ಚುಕ್ಕೆ ಗುರುತಿಲ್ಲದ ಪ್ರಶ್ನೆ 3763ಕ್ಕೆ ಅನುಬಂಧ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

ವಿಭಾಗಗಳ ಲಾಭ : ನಷ್ಟದ ವಿವರಗಳು ಸಾರಿಗೆ ಆದಾಯದ ಮೇಲೆ

(ಲಕ್ಷ ರೂ.ಗಳಲ್ಲಿ)

ವರ್ಷ	ಬೆಂಗಳೂರು (ಗ್ರಾಮಾಂತರ)	ದಾವಣಗೆರೆ	ಗದಗ	ಬಾಗಲಕೋಟೆ	ಬೀದರ್
1990-91	-35.29	-17.19	-52.60	-43.45	-197.98
1991-92	-123.90	-111.72	-117.13	-56.77	-280.99
1992-93	-40.27	-174.79	-244.45	-172.22	-290.76
1993-94	-146.68	-417.25	-415.97	-312.39	-418.87
1994-95	-266.88	-268.77	-348.77	-185.21	-469.34
1995-96	-22.83	-227.19	-303.02	-56.39	-487.69
1996-97	-132.70	-306.58	-378.64	-370.02	-606.61
1997-98	+257.88	-57.91	-212.86	-153.70	-420.26